17. ಪ್ರಕಟಣೆಗಳು

ಉಪಾಧ್ಯಕ್ಷರು : (i) ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು, ದಿನಾಂಕ : 8ನೇ ಆಗಸ್ಟ್, 2002 ರಂದು ಕರ್ನಾಟಕ ಕೈಗಾರಿಕೆಗಳ ಸೌಲಭ್ಯ ವಿಧೇಯಕ 2002ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

(ii) ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು, ದಿನಾಂಕ : 8ನೇ ಆಗಸ್ಟ್, 2002 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ವಿಧೇಯಕವನ್ನು ಯಾವುದೇ ತಿದ್ದುಪಡಿಗಳಿಲ್ಲದೆ ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಈಗ ಸಮಯವಾಗಿದ್ದರೂ ಕೂಡ ಮಾನ್ಯ ಶಿವಾನಂದ ಪಾಟೀಲರು ನಿಯಮ 73ರ ಅಡಿಯಲ್ಲಿ ಗಮನಸೆಳೆಯುವ ಸೂಚನೆ ಕೊಟ್ಟಿದ್ದಾರೆ. "ಭೀಮಾ ನದಿಯಲ್ಲಿ ನೀರು ಭತ್ತಿ ಹೋಗುತ್ತಿರುವ ವಿಚಾರವಾಗಿ ಪ್ರಸ್ತಾಪ ಮಾಡುವವರಿದ್ದಾರೆ."

18. ಗಮನ ಸೆಳೆಯುವ ಸೂಚನೆ

ವಿಷಯ : ಭೀಮಾ ನದಿಯಲ್ಲಿ ನೀರು ಬತ್ತಿ ಹೋಗುತ್ತಿರುವ ವಿಚಾರದ ಬಗ್ಗೆ

+ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) : ಮಾನ್ಯ ಉಪಾಧ್ಯಕ್ಷರೇ, ಈ ವಿಷಯವನ್ನು ಪ್ರಸ್ತಾಪ ಮಾಡಲು 18 ದಿವಸಗಳ ನಂತರ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ಕೃತಜ್ಞತೆಗಳನ್ನು ಮೊದಲಿಗೆ ಸಲ್ಲಿಸುತ್ತೇನೆ. ಭೀಮಾ ನದಿಯು ರಾಜ್ಯದಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕಂಥ ನದಿಯಾಗಿದೆ. ಅದರಲ್ಲಿ ವಿಶೇಷವಾಗಿ ಕೃಷ್ಣ ಕೊಳದಲ್ಲಿ ಬರತಕ್ಕಂಥ ಬಹಳ ದೊಡ್ಡನದಿ ಎಂದರೂ ನಾರು ಒಪ್ಪಿಕೊಳ್ಳಬೇಕಾಗುತ್ತದೆ. ಈ ನದಿಯು 786 ಕಿಲೋಮೀಟರ್ ವರೆಗೆ ಉದ್ದ ಹರಿಯುತ್ತದೆ. ಇದು ಮಹಾರಾಷ್ಟ್ರದಲ್ಲಿ ಪ್ರಾರಂಭವಾಗಿ ಆಂಧ್ರದಲ್ಲಿ ಮುಕ್ತಾಯವಾಗತಕ್ಕಂಥ ಒಂದು ಪ್ರಾಮುಖ್ಯವಾಗಿರತಕ್ಕಂಥ ನದಿ. ಜೊತೆಗೆ ನದಿಯ ವಿಸ್ತರಣೆಯು ಇಷ್ಟು ದೊಡ್ಡದಿರುವುದು ಮತ್ತು ವಿಶಾಲವಾಗಿರತಕ್ಕಂಥ ನದಿ ನಮ್ಮ ರಾಜ್ಯದ ಮೂರು ಜಿಲ್ಲೆಗಳಿಗೆ ಅಂದರೆ, ಗಡಿನಾಡು ಜಿಲ್ಲೆಗಳಾಗಿರತಕ್ಕಂಥ ಬಿಜಾಪುರ, ಗುಲ್ಬರ್ಗ, ಬೀದರ್‌ಗಳಿಗೆ ಬಹಳ ಪ್ರಮುಖ್ಯವಾಗಿರತಕ್ಕಂಥ ದುರ್ದೈವದಿಂದ ನಮ್ಮ ಬಿಜಾಪುರ ಜಿಲ್ಲೆಯು ಅವಿಭಾಜ್ಯ ಜಿಲ್ಲೆಯಾಗಿ ರತಕ್ಕಂಥ ಸಂದರ್ಭದಲ್ಲಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳು ಸೇರಿತಕ್ಕಂಥ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಯನ್ನು ಪಂಜಾಬ್ ಎಂದು ಕರೆಯುತ್ತಿದ್ದೆವು. ಇನ್ನೊಂದು ಕಡೆ ಜನರು ಇದನ್ನು ಬರಗಾಲದ ಜಿಲ್ಲೆಯಂತಲೂ ಕರೆಯುತ್ತಾರೆ. ನಾವು ಎರಡೂ ಖ್ಯಾತಿಗೆ ಪಾತ್ರರಾಗಿದ್ದೇವೆ. ಆದರೆ ಇವೊತ್ತು ನಮ್ಮ ಜಿಲ್ಲೆಯು ಪಂಚನದಿಗಳ ಬೀಡಾಗಿದ್ದರೂ ಕೂಡ ನಮ್ಮ ಜನರಿಗೆ ಕುಡಿಯಲು ನೀರಿಲ್ಲ ಎನ್ನುವ ಒಂದು ಮಾತು ಬಹಳ ನೋವಿನ ಸಂಗತಿಯನ್ನು, ವ್ಯಕ್ತ ಪಡಿಸಬೇಕಾಗುತ್ತದೆ. ನಮ್ಮಲ್ಲಿ ಐದು ನದಿಗಳು ಹರಿದರೂ ಕೂಡ, ತಮಗೆ ಗೊತ್ತಿರುವ ಹಾಗೆ ಬಿಜಾಪುರಕ್ಕೆ ಕೃಷ್ಣ

ನದಿಯಿಂದ ಕುಡಿಯುವ ನೀರುತರುತ್ತೇವೆ. ಅದರಲ್ಲಿ ವಿಶೇಷವಾಗಿ ಇಂಡಿ ಮತ್ತು ಸಿಂಧಗಿ ಪಟ್ಟಣಗಳಿಗೆ ಅಥವಾ ಆ ತಾಲ್ಲೂಕುಗಳಲ್ಲಿ ಬರತಕ್ಕಂಥ ಹಳ್ಳಿಗಳಿಗೆ ಭೀಮಾ ನದಿ ಪಾತ್ರದಿಂದ ಕುಡಿಯುವ ನೀರನ್ನು ಒದಗಿಸಿಕೊಡುತ್ತೇವೆ. ಆದರೆ ನೋವಿನ ಸಂಗತಿಯನ್ನು ಪತ್ರಿಕೆಯಲ್ಲಿ ಓದಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದು ಕಡತಕ್ಕೆ ಹೋಗುವುದು ಸರಿಯಲ್ಲ. ಎರಡನೇಯದಾಗಿ ಅವರು ಪ್ರಸ್ತಾಪ ಮಾಡಿದ ವಿಚಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಇದೆ. ಆದ್ದರಿಂದ ಪ್ರಸ್ತಾಪ ಮಾಡುವುದು ಸಬ್‌ಜುಡೀಸ್ ಆಗುತ್ತದೆ. ಎಂಬುದನ್ನು ನಾವು ತಮ್ಮ ಗಮನಕ್ಕೆ ತಂದಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ಇದು ಕೋರ್ಟ್ ಮುಂದಿರತಕ್ಕಂಥ ವಿಚಾರವು ನಿಜ. ಆದರೆ ಆ ಜಿಲ್ಲೆಯ, ಆ ಭಾಗದ ಜನರ ಭಾವನೆಗಳನ್ನು ಕೂಡ ನಾವು ಅರ್ಥ ಮಾಡಿ ಕೊಳ್ಳ ಬೇಕಾಗುತ್ತದೆ. ಸಾಯಂಕಾಲ ಎಂಟು ಗಂಟೆಯ ಹೊತ್ತಿಗೆ ಗೌರವಾನ್ವಿತ ಸದಸ್ಯರು ಇದನ್ನು ಪ್ರಸ್ತಾಪ ಮಾಡಬೇಕಾದರೆ, ಎರಡು ದಿನಗಳಿಂದ ಕಾದಿರಬೇಕಾದರೆ ಮುಖ್ಯವಾದ ಕಾರಣ ಏನು? ಇದು ಜ್ವಲಂತವಾದ ಸಮಸ್ಯೆಯಾಗಿದೆ. ಇವರು ಹೋದ ತಕ್ಷಣ ಜನರು ಇವರನ್ನು ಕೇಳುತ್ತಾರೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಉಪಸಭಾಧ್ಯಕ್ಷರೇ, ನನ್ನ ಹತ್ತಿರ ಇತರಕ್ಕಂಥ ಮಾಹಿತಿಗಳನ್ನು ಸದನದ ಮುಂದೆ ಇಡುತ್ತಾ ಇದ್ದೇನೆ. ಅದರ ಮೇಲೆ ತಾವೇನು ತೀರ್ಮಾನ ಮಾಡುತ್ತೀರೋ ಮಾಡಿ. ಈ ವಿಷಯವು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿರುವುದರಿಂದ ಈ ವಿಷಯವನ್ನು ಸದನದಲ್ಲಿ ಚರ್ಚಿಸುವುದು ಸೂಕ್ತವಲ್ಲ ಹಾಗೂ ಅದು ಸಬ್ ಜುಡೀಸ್ ಆಗಬಹುದು. ಇದು ನನ್ನ ನಿಲುವು.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಮಾನ್ಯ ಅಧ್ಯಕ್ಷರೇ, ನಾನು ಒಂದು ಕ್ಲಾರಿಫಿಕೇಶನ್ ಕೊಡುತ್ತೇನೆ. ಯಾವ ವಿಷಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಇದೆ. ಆ ವಿಷಯಕ್ಕೆ ಮುಟ್ಟದ ಹಾಗೆ ನಾನು ಮಾತನಾಡುತ್ತೇನೆ ಎಂದು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಅಕಸ್ಮಾತ್ತಾಗಿ ಎಲ್ಲಾದರೂ ಸಬ್‌ಜ್ಯುಡೀಸ್ ಆದರೆ,

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಸದಸ್ಯರು ಹೇಳಿದ ಆ ಮಾತುಗಳು ಕಡತದಲ್ಲಿರುವುದು ಸರಿಯಲ್ಲ. ನಾವು ರಾಜ್ಯದಲ್ಲಿ ಸರಕಾರ ನಡೆಸುತ್ತಾ ಇದ್ದೇವೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಅದನ್ನು ನಾನು ಪ್ರೂವ್ ಮಾಡುತ್ತೇನಲ್ಲಾ.

ಶ್ರೀ ಡಿ.ಬಿ.ಚಂದ್ರೇಗೌಡ: ನೀವು ಪ್ರೂವ್ ಮಾಡುವುದಿದ್ದರೆ ಬೇರೆ ನೋಟೀಸ್‌ನ್ನು ಕೊಡಿ.

ಉಪಾಧ್ಯಕ್ಷರು : ಆಯಿತು ದಯವಿಟ್ಟು ಇತರರು ಕುಳಿತುಕೊಳ್ಳಿ. ಶಿವಾನಂದ ಪಾಟೀಲರೇ ವಿಷಯ ಇದ್ದಲ್ಲಿ ತಾವು ಸರಕಾರದ ಗಮನವನ್ನು ಸೆಳೆಯಿರಿ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ನಾನು ಮಾನ್ಯ ಚಂದ್ರೇಗೌಡರಿಗೂ ಕೃತಜ್ಞತೆ ಅರ್ಪಿಸುತ್ತೇನೆ. ಕೋರ್ಟಿನ ವಿಚಾರವನ್ನು ಅವರು ನಮಗೆ ಜ್ಞಾಪಿಸಿದರು. ಅದು ಇದೆ

ಎಂದು ನಮಗೆ ಗೊತ್ತಿದೆ, ಸ್ವಾಮಿ ಆದರೆ ಯಾವ ವಿಷಯಕ್ಕೆ ಇದೆ ಎಂಬುದನ್ನು ಬಹಳ ನೋವಿನ ಸಂಗತಿಯನ್ನು ನಾನು ಹೇಳುತ್ತೇನೆ. ರಿಟ್‌ಪಿಟೀಶನ್ ಕಾಪಿಯನ್ನು ಕೂಡ ನೀವು ಕೊಡಿ ಎಂದರೆ ಕೊಡುತ್ತೇನೆ. ತಮ್ಮ ಮಾಹಿತಿಗೆ ಅನುಕೂಲವಾಗುವುದಾದರೆ ತೆಗೆದುಕೊಳ್ಳಿ. ಆದರಲ್ಲಿ ಏನಾದರೂ ಸಬ್‌ಜುಡೀಸ್ ಆಗುತ್ತದೆಂದು ತಾವು ಹೇಳಿದರೆ ನಾನು ಇವೊತ್ತೇ ನಿಮಗೆ ಶರಣಾಗುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ : ಈ ವಿಷಯ ಕೋರ್ಟಿನಲ್ಲಿ ಇದೆಯೆಂದು ತಾವೇ ಒಪ್ಪಿಕೊಂಡಿರಿ...

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಯಾವ ವಿಷಯ ಕೋರ್ಟ್‌ನಲ್ಲಿ ಇಲ್ಲ?

ಶ್ರೀ ಡಿ.ಬಿ.ಚಂದ್ರೇಗೌಡ : ಯಾವ ವಿಷಯ ಕೋರ್ಟ್‌ನಲ್ಲಿಲ್ಲ ಎನ್ನುವ ಪ್ರಶ್ನೆಯಲ್ಲ. ಈ ವಿಷಯವು ಕೋರ್ಟ್‌ನಲ್ಲಿದೆ. ನಾನು ಬಾಕಿ ವಿಷಯ...

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಕುಡಿಯಲಿಕ್ಕೆ ನೀರು ಸಿಗಲಿಲ್ಲ ಎಂದು ಜನ ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಇದು ನಾಚಿಕೆ ತರುವ ಸಂಗತಿಯಲ್ಲವೆ? ನಾನು ಅದನ್ನು ಇವತ್ತು ಮಾತನಾಡುತ್ತಿಲ್ಲ. ಮಾತನಾಡಿದರೆ ಸಬ್ ಜುಡೀಸಾಗುತ್ತದೆಂಬ ಅರಿವು ನನಗೆ ನನ್ನ ಜಿಲ್ಲೆಯ ಜನತೆಗಿದೆ. ಅದು ಇದ್ದಿದ್ದರಿಂದಲೇ ಇವತ್ತು ನಾವು ಕಡೆಗಣಿಸಲ್ಪಟ್ಟಿದ್ದೇವೆ ಎಂದು ನಮಗೆ ನೋವಾಗುತ್ತದೆ. ಇನ್ನೊಂದು ಕಾಪೀನೂ ಇದೆ ಬೇಕಾದರೆ ಕೊಡುತ್ತೇನೆ. ಇಂಟರಿಂ ಆರ್ಡರ್‌ಆಗಿದೆ.

ಶ್ರೀ ಹೆಚ್.ಆರ್.ಅಲಗೂರ್ : ಇದು ನನ್ನ ಕ್ಷೇತ್ರವಾದ್ದರಿಂದ ಎರಡು ನಿಮಿಷ ಮಾತನಾಡಲು ನನಗೆ ಅವಕಾಶ ಕೊಡಬೇಕು. ಕಳೆದ ಒಂದು ವಾರದ ಹಿಂದೆ ಮಹಾರಾಷ್ಟ್ರದ ಉಜ್ಜನಿ ಪ್ರದೇಶದಲ್ಲಿ ಜಾಸ್ತಿ ಮಳೆಯಾಗಿದ್ದರಿಂದ ಈಗ ಭೀಮಾ ನದಿ ತುಂಬಿ ಹರಿಯುತ್ತಿದೆ. ಮುಂದಿನ ಮೂರು-ನಾಲ್ಕು ತಿಂಗಳವರೆಗೆ ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಖಂಡಿತ ಬರುವುದಿಲ್ಲ. ಆದರೂ ಕುಡಿಯುವ ನೀರಿನ ಅಭಾವ ಇದೆಯೆಂದು ತಪ್ಪು ಮಾಹಿತಿ ಸದನಕ್ಕೆ ಬರುತ್ತಿದೆ, ದಯವಿಟ್ಟು ನೀವು ಗಮನಿಸಬೇಕು.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಅವರು ಒಂದು ಮಾತು ಹೇಳಿದರು. ಭೀಮಾನದಿ ವಿಷಯದಲ್ಲಿ ಜನ ಸುಪ್ರೀಂ ಕೋರ್ಟಿಗೆ ಹೋದದ್ದು ಕುಡಿಯುವ ನೀರಿನ ಸಲುವಾಗಿ, ಅದರ ರಿಟ್ ಪಿಟಿಷನ್ ಕಾಪಿ ಕೂಡ ಕೊಟ್ಟಿದ್ದೇನೆ. ಇವತ್ತು ನಾನು ಆ ವಿಷಯವನ್ನು ಮುಟ್ಟುತ್ತಿಲ್ಲ. ಭೀಮಾ ನದಿ ಕಳೆದ ನಾಲ್ಕು ವರ್ಷದಿಂದ ಬತ್ತುತ್ತಾ ಇದೆ. ಇವತ್ತಲ್ಲ ನಿನ್ನೆ ಅಲ್ಲ ಮೊನ್ನೇನೂ ಅಲ್ಲ. ಆದರೆ ದುರ್ದೈವದಿಂದ ನಮ್ಮ ಜಿಲ್ಲೆ ಜನ ಅದನ್ನು ಎರಡು ವರ್ಷದ ಹಿಂದೆ ಗಮನಿಸಲಿಲ್ಲ. 1992ರಿಂದ 99ರವರೆಗೆ ಬಹಳ ತೀಕ್ಷ್ಣವಾಗಿ ನೋಡಬೇಕಾಗಿತ್ತು. ಇತ್ತೀಚೆಗೆ 2000 ಇಸವಿಯಲ್ಲಿ ಈ ವಿಷಯ ಬಹಳ ಪ್ರಾಮುಖ್ಯತೆ ಪಡೆದುಕೊಂಡು ಜನರ ಗಮನವನ್ನು ಸೆಳೆಯುವ ವಿಷಯವಾಗಿ ದಿನದಿಂದ ದಿನ ಪರಿವರ್ಥನೆಯಾಗುತ್ತಿದೆ. ಇದು ಆಗಲಿಕ್ಕೆ ಕಾರಣವಿಷ್ಟೆ ಮೂಲತಃ ಭೀಮಾನದಿ ಮಹಾರಾಷ್ಟ್ರದಲ್ಲಿ ಹುಟ್ಟುತ್ತದೆ. ಮಹಾರಾಷ್ಟ್ರದಲ್ಲಿ ಈಚೀಚಿನ ದಿನಗಳಲ್ಲಿ ಯಾವ್ಯಾವ ಯೋಜನೆಗಳಿಗೆ cwc ನವರು permission ಕೊಟ್ಟಿತ್ತು ಪ್ರಾಯಶಃ ಅವುಗಳನ್ನು ಬಿಟ್ಟು ನೂರಾರು ಯೋಜನೆಗಳನ್ನು ಮಹಾರಾಷ್ಟ್ರ ಸರ್ಕಾರ ಹಾಕಿಕೊಳ್ಳುತ್ತಿದೆ. ಅದನ್ನು ನಾವೇನಾದರೂ ಗಮನಿಸಿದ್ದರೆ ಪ್ರಾಯಶಃ ಬೀಮಾನದಿ ಬತ್ತುವ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಆ ವಿಷಯದಲ್ಲಿ ಆ ಸರ್ಕಾರ ಮತ್ತು

ಹಿಂದಿನ ಸರ್ಕಾರ ಬಹಳ ನಿರ್ಲಕ್ಷ್ಯ ಮಾಡಿದೆಯೆಂದು ನಾನು ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ಯಾರೇ ಇರಲಿ, ಇವತ್ತು ಇವರಿರಬಹುದು ನಾಳೆ ಬೇರೆ ಸರ್ಕಾರ ಬರಬಹುದು. ಆದರೆ ಸಮಸ್ಯೆ ಅದಲ್ಲ. ಆ ನದಿ ಹೀಗೆ ಬತ್ತುತ್ತಾಹೋದರೆ ನದಿಪಾತ್ರದಲ್ಲಿರುವ ಜನ ತಮ್ಮ ಮೂಲಭೂತ ಹಕ್ಕನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬಂದಿದ್ದಾರೆ. ಏನೆಂದರೆ ಅಲ್ಲಿ ಸಾವಿರಾರು ವರ್ಷಗಳಿಂದ ನೂರಾರು ಹಳ್ಳಿಗಳಿವೆ. ವ್ಯವಸಾಯ ಮಾಡುತ್ತಿರಬಹುದು, ಬೇರೆಬೇರೆ ಉದ್ಯೋಗ ಮಾಡುತ್ತಿರಬಹುದು. ಈಗ ಈ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಮಹಾರಾಷ್ಟ್ರ ಸರ್ಕಾರದ ಜೊತೆ ಎರಡು ಸಲ ಮಾತನಾಡಿದ್ದಾರೆ. ಅದು ನನಗೂ ಕೂಡ ಗೊತ್ತಿದೆ. ಆದರೆ ದುರ್ದೈವವಶಾತ್ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇಃ ಇದನ್ನು ನೀರಾವರಿ ಮಂತ್ರಿಗಳು ಬಹಳ ತೀಕ್ಷ್ಣವಾಗಿ ಗಮನಿಸಿದ್ದರೆ ಪ್ರಾಯಶಃ ಈ ಪರಿಸ್ಥಿತಿ ಆ ನದಿಗೆ ಬರುತ್ತಿರಲ್ಲಿಲ್ಲ. ಬೀಮಾ ನದಿ ದಂಡೆಯ ಮೇಲೆ ಒಂದು ಕಂಪ್ಲ ಎಂದು ಒಂದು ಹಳ್ಳಿ ಇದೆ. ಅಲ್ಲಿ central water commision gange ಇದೆ. ಪ್ರತಿ ವರ್ಷ ಎಷ್ಟು ನೀರು ಹರಿಯುತ್ತದೆ ಎಷ್ಟು ನೀರು ಹರಿಯುವುದಿಲ್ಲ ಎಂದು ಮಾಪನ ಕೂಡ ಮಾಡಿದ್ದಾರೆ. ಅದರ ಪ್ರತಿ ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡಲು ಇಚ್ಛಿಪಡುತ್ತಿದ್ದೇನೆ 1992ರಿಂದ ಈ ನದಿ ಬತ್ತಲುಪ್ರಾರಂಭವಾಗಿದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಬಹಳ ತೀಕ್ಷ್ಣವಾಗ ಗಮನಿಸಿಕರ್ನಾಟಕದಲ್ಲಿ ಏನೊಂದು ತಜ್ಞರ ಸಮಿತಿ ಇದೆ ಅದಕ್ಕೆ ಇದನ್ನು ಪರಿಶೀಲನೆ ಮಾಡಲು ಒಂದು ಸಾರಿ ಆದೇಶ ಮಾಡಿದ್ದಾರೆ, ಅದಜರ ಕಾಪಿ ನನ್ನ ಹತ್ತಿರ ಇದೆ. ಆ ನದಿ ಯಾಕೆ ಬತ್ತುತ್ತಿದೆ ಎಂದು ಪರಿಶೀಲಿಸಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲು ಒಂದು ತಜ್ಞರ ಸಮಿತಿ ಮಾಡಿದ್ದಾರೆ. ಆ ತಜ್ಞರ ಸಮಿತಿ ಇದನ್ನು ವಿಚಾರ ಮಾಡಿ ಇದನ್ನು ಬೃಹತ್ ನೀರಾವರಿ ಸಚಿವರು ತೀಷ್ಣವಾಗಿ ಗಮನಿಸಿದ್ದರೆ ನಾವು ಇವತ್ತು ಸವೇಚ್ಛ ನ್ಯಾಯಾಲಯದಲ್ಲಿ ರಾಜ್ಯದ ನದಿ ಹಿತಸಕ್ತಿಯನ್ನು ಕಾಪಾಡುವಂತಹ ಒಂದು ದಾವೆಯನ್ನು ಹೂಡಬಹುದಿತ್ತೇನೋ. ಯಾಕೆಂದರೆ ಮೊನ್ನೆ ರೈತರೇನು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ, ಸರ್ಕಾರವಲ್ಲ. ಜನ ಹೋಗಿದ್ದಾರೆ. ರಿಟ್ ಪಿಟಿಷನ್‌ನಲ್ಲಿ ಭೀಮಾ ನದಿ ರೈತರ ಸಂಘವೆಂದಿದೆ ಅದರಲ್ಲಿ ಸರ್ಕಾರ ಹೋಗಬೇಕಾದ ವಿಷಯದಲ್ಲಿ ಜನ ಹೋದರು. ಜನ ಕೂಡ ಯಾಕೆ ಹೋದರು ಅಂದರೆ ಭೀಮಾನದಿಯಲ್ಲಿ ನಮ್ಮ ಕರ್ನಾಟಕದ ಪಾಲೇನಿದೆ, ನಿಮಗೆ ಗೊತ್ತಿದೆ ಬಚಾವತ್ ತೀರ್ಪಿನಲ್ಲಿ ಭೀಮಾನದಿಯಿಂದ 15 ಟಿಎಂಸಿ ನೀರನ್ನು ಹಂಚಿದ್ದಾರೆ. 15 ಟಿಎಂಸಿಯಲ್ಲಿ 1 ಟಿಎಂಸಿ ನೀರನ್ನೂ ನಾವು ಇದುವರೆಗೂ ಉಪಯೋಗ ಮಾಡಿಲ್ಲ. ನನ್ನ ಮನವಿ ಅದೇನೇ ಮತ್ತೇನಿಲ್ಲ. ಆ 15 ಟಿಎಂಸಿಯಲ್ಲಿ 6 ಟಿಎಂಸಿ ಭೀಮಾಲಿಫ್ಟಿಗಿದೆ. 4 ಟಿಎಂಸಿ ಭೀಮಾ ಫ್ಲೋಗಿದೆ. ಇನ್ನುಳಿದಿರುವುದಕ್ಕೆ ಯೋಜನೇನೇ ನಾನು ರೂಪಿಸಿಲ್ಲ. ಅದೂ ಒಂದು ದುರ್ದೈವದ ಸಂಗತೀನೇ. ಬಚಾವತ್ ತೀರ್ಪು ಬಂದ 26 ವರ್ಷವಾಯಿತು. ಇನ್ನೂ ಭೀಮಾನದಿ ಪಾತ್ರದಲ್ಲಿ ಬ್ಯಾರೇಜ್ ಎಲ್ಲಿ ಕಟ್ಟಬೇಕೆಂದು ಹುಡುಕುತ್ತಿದ್ದೇವೆ. ಆದರೆ ಕಟ್ಟುತ್ತಾ ಇಲ್ಲ. ಇದು ದುರ್ದೈವದ ಸಂಗತಿ. ಭೀಮಾ ಲಿಫ್ಟಿನಲ್ಲಿ ಅಫ್ಜಲಪುರ ತಾಲ್ಲೂಕು ಬರತ್ತದೆ. ಆ ಅಫ್ಜಲ್‌ಪುರ ತಾಲೂಕಿಗೆ 6 ಟಿಎಂಸಿ ನೀರು ಉಪಯೋಗ ಮಾಡಬೇಕೆಂದು ಬಚಾವತ್ ಅವಾರ್ಡಿದೆ. ಆದರೆ ಇನ್ನೂವರೆಗೂ ಒಂದು ಲಿಫ್ಟ ಕೆಲಸವೂ ಆಗಿಲ್ಲ. 107 ಕೋಟಿ ರೂ original estimate somewhere in 1994 ರಲ್ಲೇ ಮಾಡಿದ್ದಾರೆ. ಅದನ್ನೂ ಒಪ್ಪಿಕೊಳ್ಳುತ್ತೇನೆ. ಅದು ಇವತ್ತಿನ ಸರ್ಕಾರ ಇದ್ದ ಹಾಗೇ ಆಯಿತು. ಆ ಸರ್ಕಾರ ಈ ಸರ್ಕಾರ ಎಂದು ನಾನು

ದೂಷಿಸಲು ಹೋಗುವುದಿಲ್ಲ. ಏನು ಸಾಧ್ಯವಾಗುತ್ತದೆ. ಅದನ್ನು ಒಳ್ಳೆಯದು ಮಾಡುವ ವಿಷಯವಷ್ಟೇ ನಿಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಹೀಗಾಗಿ ಭೀಮಾ ಲಿಫ್ಟಿನಲ್ಲಿ 6 ಟಿಎಂಸಿ ನೀರನ್ನು ಉಪಯೋಗಿಸಿ ಕೊಂಡಿಲ್ಲ. ಭೀಮಾ ಫ್ಲೋನಲ್ಲಿ ಕೂಡ 4 ಟಿಎಂಸಿ ನೀರನ್ನು ನಾವು ಉಪಯೋಗ ಮಾಡಬೇಕಾಗಿತ್ತು ಅದಕ್ಕೂ ಕೂಡ ನಾವು ಮಾಡಿಲ್ಲ.

8.10ಪಿಎಂ

ಮತ್ತೆ ಸುದೈವದಿಂದ ಒಂದು ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ, ನಾಲ್ಕು ಬ್ಯಾರೇಜ್‌ಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಹಣವನ್ನು ಬಿಡುಗಡೆ ಮಾಡಿದ ಮೇಲೆ ಅದಕ್ಕೆ ಹಣವನ್ನು ಕಟ್ಟಿದ್ದಾರೆ. ಅದರಿಂದ ಶೇಖರಣೆಯಾಗತಕ್ಕಂತಹ ನೀರಿನ ಮೊತ್ತ ಕೇವಲ 0.89 ಟಿಎಂಸಿ not even 1 ಟಿಎಂಸಿ. ಇದರ ಬಗ್ಗೆ ನಾವು ಮಾನ್ಯ ಬೃಹತ್ ನೀರಾವರಿ ಸಚಿವರ ಗಮನಕ್ಕೆ ಪದೇಪದೇ ತಂದಿದ್ದೇವೆ. ಆದರೆ ದುರ್ದೈವದಿಂದ ಯಾವ ಫಲವನ್ನು ಕೊಡಲಿಲ್ಲ. ಇವತ್ತು ನಾನು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ ಈ ವರ್ಷ ಪ್ರಾಯಶಃ ಕೇವಲ ಭೀಮಾ ಒಂದೆ ಅಲ್ಲ. ಕೃಷ್ಣ ನದಿಯೂ ಕೂಡ ಬತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ, ಅವರು ಕೂಡ ಸ್ವಲ್ಪ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ದುರ್ದೈವ ವಶಾತ್ ಕೃಷ್ಣಾ ಹಾಗೂ ಘಟಪ್ರಭಾ ನದಿಗಳು ಈವನ್ ಮಲಪ್ರಭಾ ನದಿಯೂ ಕೂಡ ಈ ಸಾರಿ ಬತ್ತಿಹೋಗಿದೆ. ಇದರಲ್ಲಿ ಪ್ರಾಯಶಃ ಕೃಷ್ಣ ಕಣಿವೆಯಲ್ಲಿ ಆಗತಕ್ಕ ನೀರಾವರಿ ಯೋಜನೆಗಳಲ್ಲ ಎಲ್ಲೋ ಸ್ವಲ್ಪ ನಾವು ಎಡವುತ್ತಿದ್ದೇವೆ ಎಂದು ಸ್ವಲ್ಪ ನನಗೆ ಅನಿಸಿದೆ. ಅವರು ನೇಮಕ ಮಾಡಿರುವಂತಹ ಟೆಕ್ನಿಕಲ್ ಕಮಿಟಿಯ ವರದಿಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡಲಿಕ್ಕೆ ಇಚ್ಛಿಪಡುತ್ತೇನೆ. ಭೀಮಾ ನದಿಯ ವಿಚಾರದಲ್ಲಿ ತಾವು ನಿರ್ದೇಶನವನ್ನು ಕೊಟ್ಟ ಮೇಲೆ ಅವರು ಹೇಳುತ್ತಾರೆ As per the norms, the ratio between storage and utilisation of water is between 1.5 to 1.6. Therefore to utilise 5 TMC ft of water, the storage to be built shall be between 346 TMC ft to 390 TMC ft. ಆದರೆ ದುರ್ದೈವದಿಂದ ಇವರು 390ನ್ನು ಉಪಯೋಗ ಮಾಡಿಕೊಳ್ಳದೆ ಮುಂದೆ ಅವರು ಅಲ್ಲಿಯೇ ಹೇಳುತ್ತಾರೆ From the information, the Memorandum for private placement issued by M.K.W.D.T., ತಮ್ಮ ಸರ್ಕಾರದಿಂದ ಇದರ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದೀರಿ, ಅದರಲ್ಲಿ ಬಹಳ ಜನರು ತಜ್ಞರಿದ್ದಾರೆ, ಛೇರ್‌ಮನ್ ದೇಸಾಯಿಯವರು ಅಧ್ಯಕ್ಷತೆಯಲ್ಲಿ ಇವರು ರಿಟೈರ್ಡ್ ಪಿಡಬ್ಲ್ಯೂಡಿ ಸೆಕ್ರೆಟರಿ ಮಿಸ್ಟರ್ ಬಿ.ಸಿ. ಅಂಗಡಿ, ಶ್ರೀ ಕೃಷ್ಣಪ್ಪ, ಶ್ರೀ ಸರ್ಜರಿರಾವ್, ಶ್ರೀ ಚಿನ್ವಾಲ್, ಶ್ರೀಕುಲಕರ್ಣಿ ಇನ್ನು 7-8 ಜನರಿದ್ದಾರೆ. ಇವರು ಮೊದಲೇ ಮಾನ್ಯ ಬೃಹತ್ ನೀರಾವರಿ ಸಚಿವರ ಗಮನವನ್ನು ಸೆಳೆದಿದ್ದಾರೆ. ಈ ಲೈವ್ ಸ್ಟೋರೇಜ್‌ನ್ನು 390 ಟಿಎಂಸಿಯನ್ನು ಮಾಡುವ ಬದಲಾಗಿ 560 ಟಿಎಂಸಿಯನ್ನು ಮಹಾರಾಷ್ಟ್ರ ಸರ್ಕಾರದವರು ಸ್ಟೋರೇಜ್ ಮಾಡಿದೆ ಎಂದು ನಿಮ್ಮ ರಾಜ್ಯದ ತಜ್ಞರೇ 24-10-2001ಕ್ಕೆ ಅವರೇ ಒಂದು ನಿರ್ಣಯವನ್ನು ಕೈಗೊಂಡಿದ್ದಾರೆ. ಅದರ ಬಗ್ಗೆ ಅವರು ಸಲಹೆಯನ್ನು ಮಾಡಿದ್ದರು, ಈ ವಿಚಾರದಲ್ಲಿ ರಾಜ್ಯ ಸರ್ಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ತನ್ನ ಹಕ್ಕನ್ನು ಉಳಿಸಿಕೊಳ್ಳಲಿಕ್ಕೆ ಹೋಗಿದ್ದರೆ, ಪ್ರಾಯಶಃ ಈ ಗತಿ ಆ ನದಿಗೆ ಬರುತ್ತಿರಲಿಲ್ಲವೆಂದು ನನಗನಿಸುತ್ತದೆ. ಈಗಾಗಲೇ

ಹಲವು ವರ್ಷಗಳು ಕಳೆದಿದೆ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಇವತ್ತು ಭೀಮಾ ನದಿ ತೀರಾ ಬತ್ತಿಹೋಗಿ, ಅಲ್ಲಿರತಕ್ಕಂತಹ ಜನರು ಇವತ್ತು ದಿನೇದಿನೇ ಉಗ್ರ ಚಳುವಳಿಯನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ನಾವು ಕೂಡ ಬಹಳಷ್ಟು ನಿಂದನೆಗೆ ಕಾರಣಭೂತರಾಗಿದ್ದೇವೆ. ಆ ಜಿಲ್ಲೆಯ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ, ಅವರು ನಮಗೆ ಬೈಯುತ್ತಾರೆ, ಹೇಗೆ ನಿಮ್ಮ ಬೃಹತ್ ನೀರಾವರಿ ಸಚಿವರು "ಕೇಳಿ ಕೃಷ್ಣೆಯ ಕೂಗು" ಬರದರಲ್ಲಾ, ಪ್ರಾಯಶಃ 1994 ರಿಂದ 1999 ರಲ್ಲಿ ಇರಬಹುದು. ಇದನ್ನು ಸನ್ಮಾನ್ಯ ಹೆಚ್.ಕೆ.ಪಾಟೀಲರವರೇ ಬರೆದಿರುವುದು. ಅದರಲ್ಲಿ ಅವರು ಏನು ಬರಯುತ್ತಾರೆಂದರೆ ಅದರ ಬಹುಕಾಲದಿಂದ ಅವುಗಳ ಬೇಡಿಕೆಯನ್ನು ಈ ಡೇರಿಸಲು ಈ ನಾಡಿನ ಜನ ಅಮೆಯ ವೇಗದಲ್ಲಿ ಧಾವಿಸುತ್ತಿದ್ದರೆ. ಕೃಷ್ಣೇಯ ಕೂಗು ಕೂಗಿ, ಕೂಗಿ ಸೂರಗಿದ್ದಾಳೆ, ತನ್ನ ನೆಲದಲ್ಲಿ ಹುಟ್ಟಿ, ತನ್ನ ನೀರನ್ನು ಕುಡಿದು, ಹಸಿರು ಹಿಂಗಿಸಿಕೊಂಡು, ಬೆಳದ ತಮ್ಮ ವ್ಯಕಿತ್ವವನ್ನು ರೂಪಿಸಿಕೊಂಡ ಜನನಾಯಕರು ತನ್ನ ಬಗ್ಗೆ ಅಸಡ್ಡೆಯಿಂದ ಇರುವುದರಿಂದಾಗಿ ಕೃಷ್ಣೆಯು ನೊಂದಿದ್ದಾಳೆ ಹಾಗೂ ಬೆಂದಿದ್ದಾಳೆ. ತನ್ನ ಕನ್ನಡ ಕುವರ ಇರುವ ಹೊತ್ತಿಗೆ ಅರಂಭ ಸೂರತ್ತುಗ ಹಾಗೂ ಅಲ್ಪತೃಪ್ತಿಯ ಮನೋಭಾವಕ್ಕೆ ಮುನಿದುಕೊಂಡಿದ್ದಾಳೆ, ಕೃಷ್ಣೆಯ ನೋವನ್ನು ಅರಿಯದ ಕರ್ನಾಟಕದ ಜನನಾಯಕರು ತೀವ್ರ ಅಲಕ್ಷದಿಂದ ಇರುವುದರಿಂದಲೇ ಕೃಷ್ಣೆಯ ಉಗಮ ಹಾಗೂ ಕೆಲವು ಪ್ರದೇಶಗಳ ರಾಜ್ಯಗಳಲ್ಲಿ ಸಂವೃದ್ದಿ ಹೆಚ್ಚುಗಟ್ಟಿದೆ. ಕೃಷ್ಣೆಯ ಅಡಿಮುಡಿ ಸಂವೃದ್ಧಿಯಾಗಿದ್ದರೆ. ಮಧ್ಯ ಭಾಗದಲ್ಲಿ ಮಾತ್ರ ಹಸಿವು, ಬಡತನ, ದಾರಿದ್ರ ್ಯ ಮನೆ ಮಾಡದೆ ಇರುತ್ತಿದ್ದು. ಅದಕ್ಕಾಗಿ ಕೃಷ್ಣೆಯು ಕೊರಗುತ್ತಿದ್ದಾಳೆ, ಕರ್ನಾಟಕದ ಜನತೆಯ ಕಲ್ಯಾಣಕ್ಕಾಗಿ, ಕರ್ನಾಟಕದ ಸಂವೃದ್ಧಿಗಾಗಿ ಹಲಬುತ್ತಿದ್ದುಳೆ, ಬನ್ನಿ, ಕಟ್ಟಿ, ನಿಲ್ಲಿಸಿ, ಆಲಮಟ್ಟಿ ಅಣೆಕಟ್ಟನ್ನು. ಅವರು ಈ ಮಾತನ್ನು ಹೇಳಿ ನೋಡಿದ ಮೇಲೆ ನಮ್ಮ ಜಿಲ್ಲೆಯ ಸಾಹಿತಿಗಳು ಒಂದು ಪುಸ್ತಕವನ್ನು ಬರೆದಿದ್ದಾರೆ. ಅದನ್ನು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಮೊದಲೇ ಹೇಳಿದ್ದೆ, ಅವರು ಗಮನಸೆಳೆಯುವ ಸೂಚನೆಯ ಮೂಲಕ ಹೇಳುತ್ತಾರೆ, ಅದಕ್ಕೆ ಉತ್ತರವನ್ನು ಹೇಳುವುದಕ್ಕೆ ಸಾಧ್ಯವಿಲ್ಲ, ಅದು ಸಬ್‌ಜ್ಯುಡೀಸ್ ಎನ್ನತಕ್ಕಂತಹ ಮಾತನ್ನು ನಾನು ಹೇಳಿದೆ. ಆದರೂ ಸಹ ತಾವು ಅಲೌ ಮಾಡಿದ್ದೀರಿ, ಪಾಪ ಅವರು fag end of the session, ನಾನು ಅಬ್ಜಕ್ಟ್ ಮಾಡಬಾರದೆಂದು ಕುಳಿತಿದ್ದೇವೆ. ಅವರು ಎಷ್ಟು ಹೊತ್ತು ಯಾವ ರೂಪದಲ್ಲಿ ಭಾಷಣ ಮಾಡಬೇಕೆಂದು ತಾವು ಅನುಮತಿಯನ್ನು ಕೊಟ್ಟಿದ್ದೀರಿ, ನಾವು ಎಷ್ಟು ಹೊತ್ತು ಕುಳಿತಿರಬೇಕು, ಇದು ಶೂನ್ಯವೇಳೆಯೋ, ಗಮನಸೆಳೆಯುವ ಸೂಚನೆಯೋ, ಗಮನ ಸೆಳೆಯುರ ಸೂಚನೆಯಾಗಿದ್ದರೆ ಅದಕೆ ಉತ್ತರವನ್ನು ತರಿಸಬೇಕು. ಅವರು ಪ್ರಸ್ತಾವ ಮಾಡುವ ಬಗ್ಗೆ ನನ್ನದೇನು ಅಭ್ಯಂತರವಿಲ್ಲ, ನಾನು ಎಷ್ಟು ಹೊತ್ತು ಕುಳಿತಿರಬೇಕು ಎನ್ನುವ ಬಗ್ಗೆ ತಾವು ನಮಗೆ ಹೇಳಿದರೆ, ನಾನು ಹೊಂದಿಕೊಳ್ಳಬಹುದು. ಅರ್ಧಗಂಟೆಗಿಂತ ಹೆಚ್ಚಾಗಿ ಮಾತನಾಡುವುದು ಏನಿದು?

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮೆಗೌಡ: ನಿಮ್ಮ ಮನಸ್ಸಿಗೆ ತೃಪ್ತಿ ತರದೇ ಇದ್ದರೆ ನಾನು ಮುಗಿಸಿಬಿಡುತ್ತೇನೆ. ಇದರಲ್ಲಿ ನನ್ನ ಸಬ್‌ಮಿಷನ್ ಇಷ್ಟೆ ಇತ್ತು.

ಶ್ರೀ ಡಿ.ಬಿ.ಚಂದ್ರೇಗೌಡ : ತಾವು ಕೋಟಿ ಮಾಡುತ್ತಾ ಕುಳಿತುಕೊಂಡರೆ ಹೇಗೆ? ಮಾನ್ಯ ಶಿವಾನಂದ ಪಾಟೀಲರೆ, ನೀವು ಕಳುಹಿಸಿದ ವಿಚಾರದ ಇಂಪಾರ್ಟೆನ್ಸ್ ಕಡಿಮೆ ಮಾಡಬಾರದೆಂಬ ದೃಷ್ಟಿಯಿಂದ ನಾವು ಇಷ್ಟುಹೊತ್ತು ಕುಳಿತುಕೊಂಡು ನಿರ್ವಿಕಾರ ಭಾವನೆಯಿಂದ ಎಲ್ಲವನ್ನೂ ಕೇಳಿದ್ದೇವೆ.

ಶ್ರೀ ಶಿವಾನಂದ ಸಿದ್ದರಾಮಗೌಡ : ಸನ್ಮಾನ್ಯ ಅಧ್ಯಕ್ಷರು ಇಲ್ಲಿ 5 ನಿಮಿಷದಿಂದ ಕುಳಿತುಕೊಂಡಿದ್ದೀರಿ.(ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು).

ಶ್ರೀ ಡಿ.ಬಿ.ಚಂದ್ರೇಗೌಡ:- ಇಲ್ಲಿ ಯಾವುದೂ ಗಮನ ಸಳೆಯುವ ಸೂಜನೆಗಳಿಲ್ಲ.ಉತ್ತರವನ್ನು ಹೇಳುವುದಕ್ಕೆ ಮಂತ್ರಿಗಳಿಲ್ಲ, ತಾವು ಇದರ ಬಗ್ಗೆ ಪ್ರಸ್ತಾಪ ಮಾಡಿದರೆ ಹೇಗೆ?

ಅಧ್ಯಕ್ಷರು : ಮಾನ್ಯ ಶಿವಾನಂದ ಪಾಟೀಲರ, ದಯವಿಟ್ಟು ಒಂದು ನಿಮಿಷ ತಾಳಿ, I want to repeat what Mr. Chandre Gowda has said; "ನನಗೆ 5 ನಿಮಿಷ ಸಮಯವನ್ನು ಕೊಡಿ, ನಾವು ಮೆನಷನ್ ಮಾಡುತ್ತೇನೆಂದು, ತಾವು ಹೇಳಿದ್ದೀರಿ. ಒಂದು ಕಡೆ ಸುಪ್ರೀಂಕೋರ್ಟಿನಲ್ಲಿ ಪೆಂಡಿಂಗ್ ಇದೆ, ಸುಪ್ರಿಂಕೋರ್ಟಿನಲ್ಲಿರುವುದರಿಂದ ಸಬ್‌ಜ್ಯುಡೀಸ್ ಆಗುತ್ತದೆ, ಸುಪ್ರಿಂಕೋರ್ಟಿನವರು ನಿಮಗೆ ನೋಟೀಸ್ ಕೊಡುವುದಿಲ್ಲ, ಸ್ಪೀಕರ್‌ಗೆ ನೋಟೀಸನ್ನು ಕೊಡುತ್ತಾರೆ. ಇದು ನಿಮಗೆ ಗೊತ್ತೇನು?you please conclude ಹೆಚ್. ಕೆ. ಪಾಟೀಲರು ಏನೂ ಲೆಟರ್ ಬರೆದಿರುವ ವಿಚಾರ ಇಲ್ಲಿ ಏತಕ್ಕೆ? It is going to help you immediately, ನಿಮಗೆ ಏನು ಬೇಕು? ಕುಡಿಯುವ ನೀರು ಬೇಕು, ಇರಿಗೇಷನ್ ಬರಬೇಕು ಅಷ್ಟೇ ತಾನೇ? ಅದರ ಬಗ್ಗೆ ತಾವು ಮಾತ್ರ ಮಾತನಾಡಬೇಕು. ನೀರಿಗೆ ತೊಂದರೆಯಾಗಿದೆ ಎಂದು ಪ್ರಸ್ತಾಪ ಮಾಡಿ, ಕೋರ್ಟಿನ ಮುಂದೆ ವಾದ ಮಾಡುವಂತಹ ವಿಷಯಗಳನ್ನು, ರೂಲ್ಸ್ ಮತ್ತು ರೆಗ್ಯುಲೇಷನ್ಸ್‌ಗಳನ್ನು ಇಲ್ಲಿ ಏತಕ್ಕಾಗಿ ಓದುತ್ತೀರಿ?"

ಶ್ರೀ ಪಾಟೀಲ್ ಶಿವಾನಂದ. ಸಿದ್ದರಾಮಗೌಡ : ಮಾನ್ಯ ಅಧ್ಯಕ್ಷರೆ, ನಾನು ಕೋರ್ಟಿನ ಮುಂದಿರುವ ವಿಚಾರದ ಬಗ್ಗೆ ಒಂದಾದರೂ ಟಚ್ ಮಾಡಿದ್ದರೆ ತಾವು ಹೇಳಿದರೆ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ರಿಪೀಟ್ ಆಗಿ ಹೇಳಿದ್ದರಿಂದ ಇದು ಇಂಪಾರ್ಟ್‌ಟಿಂಟ್ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರುವುದರಿಂದ ಅದಕ್ಕಾಗಿ ನಾನು ಅಲೌ ಮಾಡಿದೆ. But you are misusing it.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ನಾನು ಮಿಸ್‌ಯೂಸ್ ಮಾಡಿದೆನೆಂದು ನಿಮಗೆ ಅನಿಸಿದರೆ ನಾನು ಸುಮ್ಮನೆ ಕುಳಿತುಕೊಂಡು ಬಿಡುತ್ತೇನೆ.

ಅಧ್ಯಕ್ಷರು : ತಾವೊಬ್ಬರೆ, ಅಲ್ಲ, ಅವರು ಇದ್ದಾರೆ, ಬೆಳಗಾಂನವರು ಇದ್ದಾರೆ,No, no. you please conclude, You can't read out all those letters. ಸುಪ್ರಿಂಕೋರ್ಟಿನವರು ನಿಮಗೆ ನೋಟೀಸ್‌ನ್ನು ಕೊಡುವುದಿಲ್ಲ, ಸ್ಪೀಕರ್ ಗೆ ನೋಟೀಸನ್ನು ಕೊಡುತ್ತಾರೆ.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಸಬ್‌ಜ್ಯುಡೀಸ್ ಆಗುವಂತಹ ಮ್ಯಾಟರನ್ನು ನಾನು ಟಚ್ ಮಾಡಿಲ್ಲ.

ಅಧ್ಯಕ್ಷರು : ನಿಮಗೆ ಹೇಗೆ ಗೊತ್ತು? How do you know that? Are you a Judge? No, no. I can't allow, Please conclude ಆ ಏರಿಯಾದಲ್ಲಿರುವವರು: ಎಲೆಕ್ಟ್ ಆಗಿರುವವರು ಮಾತನಾಡುವವರಿದ್ದಾರೆ. They want to talk.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಅವರು ಮಾತನಾಡಿದ ಮೇಲೆಯೇ ನಾನು ಮಾತನಾಡುತ್ತೀರಿ.

ಅಧ್ಯಕ್ಷರು : ನೀವು ಮಾತನಾಡಿ ಬೇಡವೆಂದಿಲ್ಲ, ತಾವು ಪ್ರಸ್ತಾಪ ಮಾಡುವುದಕ್ಕೆ ಐದು ನಿಮಿಷ ಕೇಳಿದ್ದೀರಿ, ನಾನು ಒಳಗಡೆ ಟಿವಿಯಲ್ಲಿ ನೋಡುತ್ತಿದ್ದೇನೆ, ತಾವು 10 ನಿಮಿಷದಿಂದ ಮಾತನಾಡುತ್ತಿದ್ದೀರಿ. ಈಗಾಗಲೇ 10 ರಿಂದ 15 ನಿಮಿಷಗಳು ಕಳೆದಿದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : 10 ನಿಮಿಷಗಳಾಗಿದ್ದರೆ ಮಾನ್ಯ ಅಧ್ಯಕ್ಷರೆ, ಕುಳಿತುಕೊಂಡುಬಿಡಲಾ?

ಅಧ್ಯಕ್ಷರು : ತಮ್ಮಿಷ್ಟ, ತಾವು ಮೆನ್‌ಷನ್ ಮಾಡಬೇಕಾಗಿರುವುದೇನು? ನಮಗೆ ನೀರಿನ ಬಗ್ಗೆ ತೊಂದರೆಯಾಗಿದೆ ಆದಷ್ಟು ಬೇಗನೆ ಮಾಡಿ ಎಂದು ಕೇಳಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸುಪ್ರಿಂಕೋರ್ಟಿನಲ್ಲಿ ಪೆಂಡಿಂಗ್ ಇದೆ ಎಂದು ಹೇಳುತ್ತಿದ್ದರೂ ಸಹ ಅದನ್ನೇ ತಾವು ಎತ್ತಿ ಪ್ರಸ್ತಾಪ ಮಾಡುತ್ತಿದ್ದರೆ ಹೇಗೆ?

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಅಲ್ಲಿ ಪಿಟೀಷನ್ ಕೊಟ್ಟಿದ್ದೇನೆ ನೋಡಿ ಸ್ವಾಮಿ.

Mr. Speaker: How do you know that it won't become sub-judice. Come on, tell me. No, no. This is not High Court. This is Legislature. ನಿಮ್ಮ ಕಷ್ಟಸುಖಗಳು, ನಿಮ್ಮ ಮತದಾರರ ಹಿತಚಿಂತನೆಯ ಬಗ್ಗೆ ನೀವು ಮಾತನಾಡಬಹುದು. ಅಷ್ಟೆಯೇ ಹೊರತು, This is not a court, you cannot argue like this. You plese argue in the Hight Court, I have no objection; not here.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ನಾನು ಒಂದು ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರೆ.....

ಅಧ್ಯಕ್ಷರು : ತಾವು ಕನ್‌ಕ್ಲೂಡ್ ಮಾಡುತ್ತೀರೋ, ಅಥವಾ ಇಲ್ಲವೋ ಆ ಭಾಗದಿಂದ ಚುನಾಯಿತರಾಗಿ ಬಂದ ಎಂ.ಎಲ್.ಎ.ಗಳಿದ್ದಾರೆ, ಅವರು ಮಾತನಾಡಬೇಕಾಗಿದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ನಾನೇನು ಸಬ್ ಜ್ಯುಡೀಸ್ ಆಗುವ ರೀತಿಯಲ್ಲಿ ಮಾತನಾಡುತ್ತಿಲ್ಲ.

ಅಧ್ಯಕ್ಷರು : ಸಭೆಯಲ್ಲಿ ನಡೆಯುತ್ತಿರುವ ಎಲ್ಲಾ ಕಲಾಪಗಳನ್ನು ನನ್ನ ಛೇಂಬರ್‌ನಲ್ಲಿರುವ ಟಿ.ವಿ.ಯಲ್ಲಿ ವೀಕ್ಷಿಸುತ್ತಿದ್ದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಅಧ್ಯಕ್ಷರೇ, ಇನ್ನು ಐದು ನಿಮಿಷದಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ತಾವು ಅನುಮತಿ ಕೊಡಿ.

ಅಧ್ಯಕ್ಷರು : ಆಯಿತು, ಮುಗಿಸಿ, ಯಾವುದು ಸಬ್‌ಜ್ಯುಡೀಸ್ ಆಗುವುದಿಲ್ಲವೆಂದು ನಮಗೇನು ಗೊತ್ತಿದೆ. only Supreme Court can say.

ಶ್ರೀ ಸಿ.ಎಸ್. ನಾಡಗೌಡ (ಸರ್ಕಾರಿ ಮುಖ್ಯ ಸಚೇತಕರು) : ಸನ್ಮಾನ್ಯ ಅಧ್ಯಕ್ಷರೇ, ಈಗ ಕಾಲಿಂಗ್ ಅಟೆನ್‌ಶನ್‌ನಲ್ಲಿ ಅವರು ಕಳುಹಿಸಿದ ವಿಷಯವೇನೆಂದರೆ, ಅಲ್ಲಿ ಕುಡಿಯುವ ನೀರಿನ ಅಭಾವವಿದೆ. ತೊಂದರೆಯಾಗಿದೆ, ಭೀಮಾ ನದಿ ನೀರು....

ಅಧ್ಯಕ್ಷರು : ಅಷ್ಟು ಹೇಳಿಬಿಟ್ಟರೆ ಸಾಕು. ಹೆಚ್.ಕೆ.ಪಾಟೀಲರು ಈ ರೀತಿ ಬರೆದರು, ಅವರು ಈ ರೀತಿ ಬರೆದರು ಎಂದು ಹೇಳಿದರೆ ನೀವು ಮಾತನಾಡುತ್ತಿರುವುದೆಲ್ಲವೂ ಸಬ್‌ಜ್ಯೂಡೀಸ್ ಮ್ಯಾಟರ್ಸ್ ಆಗಿದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಶ್ರೀ ಹೆಚ್.ಕೆ. ಪಾಟೀಲ್‌ರವರು ಬರೆದದ್ದು ಸುಪ್ರೀಂಕೋರ್ಟ್‌ಗೆ ಹೋಗಿಲ್ಲ.

ಅಧ್ಯಕ್ಷರು : ಅವರು ನೋಟೀಸ್ ಕೊಡವುದು ಸ್ಪೀಕರ್‌ಗೆ, ಹರಿಯಾಣ ಸ್ಪೀಕರ್‌ಗೆ ಸುಪ್ರೀಂಕೋರ್ಟ್‌ನವರು ನೋಟೀಸ್ ಕೊಟ್ಟು they have asked the speaker to appear before the Court. ನಿಮಗೇನು ಗೊತ್ತಿದೆ.

(ಗೊಂದಲ)

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಆಯ್ತು ಅಧ್ಯಕ್ಷರೇ, ನೀವು ಬೇಡವೆಂದರೆ ನಾನು ಕುಳಿತುಬಿಡುತ್ತೇನೆ.

ಅಧ್ಯಕ್ಷರು : ಬೇಡವೆಂದರೆ ಬಿಡಿ.

ಶ್ರೀ ಅರಗ ಜ್ಞಾನೇಂದ್ರ : ಅವರು ಇಷ್ಟೊತ್ತಿಗೆ ಮಾತನಾಡಿ ಮುಗಿಸುತ್ತಿದ್ದರು. ಇದೊಳ್ಳೆ ಕತೆಯಾಯಿತಲ್ಲ. ನೀವೇ ಮಾತನಾಡುತ್ತಿದ್ದೀರಲ್ಲಾ. ಅವರಿಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಮಾತನಾಡಿ ಮುಗಿಸಿ ಎಂದರೂ ಅವರು ಸುಮ್ಮನೆ ಕುಳಿತುಬಿಟ್ಟರೆ ಹೇಗೆ? ತಾವು ಮಾತನಾಡಿ ಬೇಗ ಮುಗಿಸಿ. You please conclude.

ಶ್ರೀ ಸಿ.ಎಸ್. ನಾಡಗೌಡ (ಸರ್ಕಾರಿ ಮುಖ್ಯ ಸಚೇತಕರು) : ಅಧ್ಯಕ್ಷರೇ, ನಾನು ಏನು ಹೇಳಲು ಹೊರಟೆನೆಂದರೆ, ಅಲ್ಲಿನ ಹೊಳೆಯಲ್ಲಿ ನೀರು ಹರಿಯುತ್ತಿದೆ, ಸರ್ಕಾರದ ವತಿಯಿಂದ ಸಾಕಷ್ಟು ಬೋರ್‌ಗಳನ್ನು ಹಾಕಿದ್ದೇವೆ. ಕಾಲಿಂಗ್ ಅಟೆನ್‌ಷನ್ ಮೂಲಕ ಈ ವಿಷಯವನ್ನು ಚರ್ಚಿಸಲು ರೂಲ್ಸ್ ಇದೆಯೇ? Whether that calling attention in that respect will survive? That is my question.

ಶ್ರೀ ಡಿ.ಬಿ. ಚಂದ್ರೇಗೌಡ : ರೂಲ್ಸ್ ಪ್ರಕಾರ ಮಾತನಾಡುವುದಾದರೆ, calling attention is not admitted and we have given our objection. That's how I have brought it to the notice of the House. .....

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಈಗ ತಾವು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು : ನಾನು ಅವಕಾಶ ಕೊಟ್ಟಿದ್ದೇನೆ. ಹಾಗಂತ ಅವಕಾಶ ಕೊಟ್ಟಿದ್ದೇನೆಂದು ಅವರು ಬೇರಾವುದೋ ವಿಷಯ ಪ್ರಸ್ತಾಪಿಸಿದರೆ ಹೇಗೆ? You please conclude.

(ಗದ್ದಲ)

ಅಧ್ಯಕ್ಷರು : ತಾವೆಲ್ಲರೂ ಕುಳಿತುಕೊಳ್ಳಿ. ತಮಗೂ ನಾನು ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಹರಿಯಾಣ ಸ್ಪೀಕರ್‌ಗೆ ಸುಪ್ರಿಂಕೋರ್ಟ್‌ನವರು ನೋಟೀಸ್ ನೀಡಿದ್ದಾರೆ. ಇದರ ಉದಾಹರಣೆಗಳಿವೆ. ನಿಮಗೇನು ಗೊತ್ತಿದೆ? ನಾಳೆ ದಿವಸ ನಾವು ಅಲ್ಲಿ ಹೋಗಿ ಅಪಿಯರ್ ಆಗಬೇಕು. ಗೊತ್ತೇ? We have to appear before the Supreme Court. ಅಲ್ಲಿ ಕೈಕಟ್ಟಿಕೊಂಡು ನಿಂತುಕೊಳ್ಳಬೇಕು ಗೊತ್ತಿದೆ. ಈಗ ತಾವು ಕುಳಿತುಕೊಳ್ಳುತ್ತೀರೋ ಇಲ್ಲವೋ? ತಮಗೂ ಸಮಯ ಕೊಡುತ್ತೇನೆ, ತಾವೂ ಮಾತನಾಡಿ. ತಾವು ಮಾತನಾಡುವಾಗಲೂ ಸಬ್‌ಜ್ಯುಡೀಸ್ ಮ್ಯಾಟರ್ಸ್ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ, ಕುಡಿಯುವ ನೀರಿನ ಬಗ್ಗೆ ಮಾತ್ರ ಮಾತನಾಡಿ ಅಷ್ಟೆ. ಪಾಟೀಲ್‌ರೇ, ತಾವು ಮಾತನಾಡಿ ಮುಗಿಸಿ. ಕಳೆದ ಒಂದು ತಿಂಗಳಿನಿಂದ ಎಲ್ಲವೂ ಸರಾಗವಾಗಿ ನಡೆದುಕೊಂಡು ಬಂದಿದೆ, ಕೊನೆಯ ದಿವಸ ಏಕೆ ಈ ರೀತಿ? ಕೊನೆಯ ದಿವಸವಾಗಿರುವ ಇಂದು ಎಲ್ಲರೂ ಆರಾಮವಾಗಿ ಹೋಗೋಣ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ : ನಾನು ಇನ್ನು ಎರಡು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಅಧ್ಯಕ್ಷರೆ, ನಿಮ್ಮ ಮುಖಾಂತರ ನಾನು ಸರ್ಕಾರದ ಗಮನಸೆಳೆಯಲು ಮಾಡುವ ಪ್ರಯತ್ನ ಇಷ್ಟೆ. ಸರ್ಕಾರಕ್ಕೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರಲ್ಲಿ ಲೋಪದೋಷವಿರುವ ವಿಷಯವನ್ನು ಸಾಧ್ಯವಾದಷ್ಟು ಮಟ್ಟಿಗೆ ತಮ್ಮ ಗಮನಕ್ಕೆ ತರಲು ನಾನು ಪ್ರಯತ್ನಿಸಿದ್ದೇನೆ. ಆದರೆ, ಅಲ್ಲಿನ ನದಿ ತೀರದ ಜನರು ಸುಪ್ರಿಕೋರ್ಟಿಗೆ ಹೋಗಿರತಕ್ಕಂಥಾದ್ದು ನಿಜ. ಆದರೆ, ಸುಪ್ರಿಂಕೋರ್ಟ್ ಈ ಜನರು ಏನು ಹೋಗಿದ್ದಾರೆ, ಮಹಾರಾಷ್ಟ್ರವನ್ನೂ ಸಹ ಪಾರ್ಟಿಯನ್ನಾಗಿ ಮಾಡಿತ್ತು. ಇದು ನಿಮಗೆ ಗೊತ್ತಿದೆ. ಏಕೆಂದರೆ, ಹಿಂದೆ ಆಲಮಟ್ಟಿ ಅಣೆಕಟ್ಟಿನ ಗೇಟನ್ನು ನಾವು 524ನಿಂದ 519ಕ್ಕೆ ರಿಸ್ಟ್ರಿಕ್ಟ್ ಮಾಡಬೇಕಾದರೆ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಶನ್ ಮೇಲೆ ಆ ಇನ್ಯೂ ಪ್ರಾರಂಭವಾಯಿತು. ಮುಂದೆ ಆಂಧ್ರಪ್ರದೇಶದ ಸರ್ಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿ ಅದನ್ನು 519ಕ್ಕೆ ರಿಸ್ಟ್ರಿಕ್ಟ್ ಮಾಡಿತು. ನಮ್ಮ ಜನರೂ ಕೂಡ ಸುಪ್ರಿಕೋರ್ಟಿಗೆ ಹೋಗಿದ್ದರು. ಅವರ ರಿಟ್‌ನಲ್ಲಿ ಸುಪ್ರಿಂಕೋರ್ಟ್ ಅವರಿಗೆ ಏನು ಹೇಳಿತೆಂದರೆ, "This issue becomes an inter-state dispute. We will not entertain your writ. ಎಂದು ಹೇಳಿದರು. ಅದಕ್ಕೋಸ್ಕರ ಆ ರಿಟ್ ಅನ್ನು ವಜಾಗೊಳಿಸಬೇಕೆಂದು ಸರ್ವೋಚ್ಚ ನ್ಯಾಯಾಲಯ ನಿರ್ಣಯ ಕೈಗೊಂಡಿತು. ಕೊನೇ ಪಕ್ಷ ನಮ್ಮ ಜನರು ಸರ್ವೋಚ್ಚ ನ್ಯಾಯಾಲಯದ ಮುಂದೆ ಏನು ವಿನಂತಿಸಿಕೊಂಡರು ಎಂದರೆ, ಕೊನೇ ಪಕ್ಷ ಕುಡಿಯುವ ನೀರಿನ ವಿಚಾರದ ದೃಷ್ಟಿಯಿಂದಲಾದರೂ ಈ ರಿಟ್ ಅನ್ನು ತಾವು ಎಂಟರ್‌ಟೇನ್ ಮಾಡುವ ಮೂಲಕ ವಿಚಾರ ಮಾಡಬೇಕೆಂದು ಸಬ್‌ಮಿಶನ್ ಮಾಡಿದ ಮೇಲೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಆ ರಿಟ್ ಅನ್ನು ಇವೊತ್ತು ಎಂಟರ್‌ಟೇನ್ ಮಾಡಿದ್ದಾರೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಸಿಕೊಳ್ಳುವುದೇನೆಂದರೆ, ಬಚಾವತ್ ತೀರ್ಪಿನ ಪ್ರಕಾರ 2000ದ ಇಸವಿಯೊಳಗೆ ನೀರನ್ನು ಸಂಪೂರ್ಣವಾಗಿ ನಾವು ಉಪಯೋಗಿಸಿಕೊಳ್ಳಬೇಕಾಗಿತ್ತು, ಉಪೋಗಿಸಿಕೊಳ್ಳದಿದ್ದರೆ ನಾವು ನಮ್ಮ ಹಕ್ಕನ್ನು ಕಳೆದುಕೊಳ್ಳುತ್ತೇವೆಂಬ ಒಂದು ಅರಿವು ನಮಗೆಲ್ಲರಿಗೂ ಇದೆ. ಆ 15 ಟಿಎಂಸಿ ನೀರನ್ನು ನಮ್ಮ ರಾಜ್ಯ ಸರ್ಕಾರ ಯಾವುದೇ ದೃಷ್ಟಿಯಿಂದ my way of flow, by way of lift, by way of minor irrigation ಯಾವುದೇ ರೀತಿಯಿಂದ ತಾವು

ಉಪಯೋಗಿಸಿಕೊಂಡು ನಮ್ಮ ನೀರನ್ನು ತಾವು ಕಾಪಾಡತಕ್ಕಂಥ ಒಂದು ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಎರಡನೆಯದಾಗಿ, ಈಗ ಸರ್ವೋಚ್ಚ ನ್ಯಾಯಾಲಯದ ಮುಂದಿರತಕ್ಕಂಥ ವಿಷಯ ಕೇವಲ ಕುಡಿಯುವ ನೀರಿನ ವಿಷಯಕ್ಕೆ ಮಾತ್ರ ಸೀಮಿತವಾಗಿದೆ. ಆದರೆ, ದುರ್ದೈವವಶಾತ್, ಮಹಾರಾಷ್ಟ್ರ, ಸರ್ಕಾರ ಬಚಾವತ್ ಅರ್ವಾಡ್ ಅನ್ನು ಉಲ್ಲಂಘನೆ ಮಾಡಿ ಅವರಿಗೆ ಕೊಟ್ಟಿರುವ 95 ಟಿಎಂಸಿ ನೀರನ್ನು ಬಿಟ್ಟು 125 ಟಿಎಂಸಿನೀರನ್ನು ಅವರು ಉಪಯೋಗಿಸಿಕೊಳ್ಳುತ್ತಿದ್ದಾರೆ. ನನ್ನ ಬಳಿ ಆ ಕುರಿತ ದಾಖಲೆಗಳಿದ್ದು, ಬೇಕಿದ್ದರೆ ಒದಗಿಸಿಕೊಡುತ್ತೇನೆ.

ಅಧ್ಯಕ್ಷರು : ಬೇಡಿ. ದಯವಿಟ್ಟು ಬೇಡಿ. you are not arguing before the Supreme Court. ಕೋರ್ಟಿನಲ್ಲಿ ಈ ವಿಚಾರ ಇದೆ ಎಂದು ಹೇಳಿದರೂ ಸಹ,.....

(ಗದ್ದಲ)

ಶ್ರೀ ಜಗದೀಶ್ ಶೆಟ್ಟರ್ : ಮಹಾರಾಷ್ಟ್ರ ಸರ್ಕಾರ ಏನು ತಪ್ಪು ಮಾಡಿದೆ ಎಂಬ ಬಗ್ಗೆ ಅವರು ಹೇಳುತ್ತಿದ್ದಾರೆ. ಅದರ ಬಗ್ಗೆ ನಮ್ಮ ರಾಜ್ಯದವರೆಲ್ಲರೂ ಸ್ವಲ್ಪ ಕಾಳಜಿ ತೆಗೆದುಕೊಳ್ಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವ ಒಂದೇ ವಿಷಯವೇನೆಂದರೆ, ಇವೊತ್ತು ಐದು ಕಾಲಿಂಗ್ ಅಟೆನ್‌ಶನ್‌ಗಳಿವೆ. Please hear me. ಐದು ಕಾಲಿಂಗ್ ಅಟೆನ್‌ಶನ್‌ಗಳ ಬಿಸಿನೆಸ್ ಬಂದಿದೆ. ಅದನ್ನು ಬಿಟ್ಟು ವಿಶೇಷ ಸಂದರ್ಭವೆಂದು ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟರೆ, ಈಗಾಗಲೇ ಮುಕ್ಕಾಲು ಗಂಟೆಯಾಯಿತು. ಕಾಲಿಂಗ್ ಅಟೆನ್‌ಶನ್‌ನಲ್ಲಿರುವುದನ್ನು ಜೀರೋ ಅವರ್‌ಗೆ ಪರಿವರ್ತನೆ ಮಾಡಿದರೆ entire gamut of the Bachawath Awardನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದಾದರೆ I have no objection.

MR. SPEAKER: You please conclude.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರತ್ತ ತಾವು ಸ್ವಲ್ಪ ಗಮನಹರಿಸಬೇಕು. ಏಕೆಂದರೆ, ಅವರಿಗೆ ಮಾತನಾಡಲು ಐದು ನಿಮಿಷ ಅರಕಾಶ ಕೊಟ್ಟಿದ್ದೀರಿ. ಅವರು ನಲವತ್ತು ನಿಮಿಷಗಳ ಕಾಲ ಮಾತನಾಡಿದ್ದಾರೆ. ಇನ್ನು ಎಷ್ಟು ಸಮಯ ಕೊಡಬೇಕು? ಐದು ನಿಮಿಷದಲ್ಲಿ ಪ್ರೊಜೆಕ್ಟ್ ಮಾಡಿ ಎಂದರೆ ಅಷ್ಟು ಸಮಯ ಸಾಕಾಗುವುದಿಲ್ಲವೆಂದರೆ ಹದಿನೈದು ನಿಮಿಷಗಳಲ್ಲಿ ಮಾತನಾಡಲಿ. ನಲವತ್ತು ನಿಮಿಷಗಳ ಕಾಲ ಮಾತನಾಡಿದ್ದಾರೆ. ಅವರು ಮುಗಿಸಬೇಕೋ ಬೇಡವೋ?

ಅಧ್ಯಕ್ಷರು : ತಾವು ಮಾತನಾಡಿ. ತಮಗೂ ಅಷ್ಟೆ. ಸಬ್‌ಜುಡೀಸ್ ಬರುವಂಥ ಮ್ಯಾಟರ್ ಅನ್ನು ಮಾತನಾಡಬೇಡಿ.

ಶ್ರೀ ಅರಗ ಜ್ಞಾನೇಂದ್ರ : ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡಿ ಮುಗಿಸಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಎಲ್ರಿ ಮುಗಿಸ್ತಾರೆ? Tell me. ಅವರು ಮುಗಿಸುವುದಿಲ್ಲವಲ್ಲಾ ಮತ್ತೆ ಪೇಪರ್ಸ್ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅವರು ಮುಗಿಸುವುದಿಲ್ಲ.

ಶ್ರೀ ಕರಿಯಣ್ಣ : ಅವರು ಐದು ನಿಮಿಷಕ್ಕೆ ಮುಗಿಸುವುದಿಲ್ಲವೆಂಬುದು ನಮಗೆ ಗೊತ್ತಿದೆ. ಎಷ್ಟೊತ್ತು ನೀವು ವಾದ ಮಾಡುವುದು?

(ಗದ್ದಲ)

MR. SPEAKER: Hon. Member Sri Patil, he is unnecessorily delaying by showing the papers and all that, ನಾನು ಹೇಳಿದ ಮೇಲೆ, he must conclude by saying ಸರ್ಕಾರದವರು ಅಡ್ವೊಕೇಟ್ ಜನರಲ್‌ರವರಿಗೆ ಇದರ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳಬೇಕೆಂದು ಹೇಳಿ ತಮ್ಮ ಮಾತುಗಳನ್ನು ಮುಗಿಸಿ. ಅಷ್ಟು ಸಾಕು. ಪುನಃ ಪುನಃ ನೀವು ಬೇರೆ ವಿಚಾರ ಪ್ರಸ್ತಾಪಿಸಿದರೆ I have to call another MLA. ಅಷ್ಟೆ.

ಶ್ರೀ ವಿಜಯಕುಮಾರ್‌ಶೆಟ್ಟಿ : ಅದು ಸಬ್ ಜ್ಯುಡೀಸ್ ಆಗುತ್ತದೆಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಹೇಳುತ್ತಿದ್ದಾರೆ. ತಾವು ಪುನಃ ಅವರಿಗೆ ಅರ್ಧ, ಮುಕ್ಕಾಲು ಗಂಟೆ ಕಾಲ ಭಾಷಣ ಮಾಡಲು ಅವಕಾಶ ಮಾಡಿಕೊಡುತ್ತೀರಲ್ಲಾ?

MR. SPEAKER: Don't question the decision of the Chair. ಅದರ ಬಗ್ಗೆ ನಮ್ಮ ಕಛೇರಿಗೆ ಬಂದು ಹೇಳಿ. Not here. ಈಗ ತಾವು ಮಾತನಾಡಿ ಮುಗಿಸುತ್ತೀರೋ ಇಲ್ಲವೋ? ಹೇಳಿ. ಸರ್ಕಾರದವರು ಇದರ ಬಗ್ಗೆ ಅಡ್ವೊಕೇಟ್ ಜನರಲ್‌ರವರಿಗೆ ಹೇಳಿ ಸಾಧ್ಯವಾದಷ್ಟು ನಮಗೆ ಅನುಕೂಲ ಮಾಡಿಕೊಡುವಂತೆ ಕ್ರಮ ಕೈಗೊಳ್ಳುವಂತೆ ಹೇಳಿ ಮುಗಿಸಬೇಕು.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ : ಆಯ್ತು, ಅಷ್ಟೇ ಹೇಳಿಬಿಡುತ್ತೇನೆ. ಸರ್ಕಾರದವರು ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಮುಗಿಸಿಕೊಡಬೇಕೆಂದು ಹೇಳುತ್ತೇನೆ.

+ ಶ್ರೀ ಹೆಚ್.ಆರ್. ಅಲಗೂರ್ ಬೆಳ್ಳಿಳ್ಳಿ : ಅಧ್ಯಕ್ಷರೆ, ವಿಷಯ ಸಬ್‌ಜ್ಯುಡೀಸ್ ಇರುವುದರಿಂದ ನಾನು ಈ ವಿಚಾರದ ಬಗ್ಗೆ ಹೆಚ್ಚು ಮಾತನಾಡದೆ ಮಾನ್ಯ ಸದಸ್ಯರಾದ ಶಿವಾನಂದ ಪಾಟೀಲ್‌ರವರು ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಭೀಮಾ ನದಿ ತೀರದಲ್ಲಿ ವಾಸಿಸುತ್ತಿರುವ ಹಳ್ಳಿಯ ಜನರಿಗೆ ಕುಡಿಯುವ ನೀರಿನ ಅಭಾವವಿದ್ದು, ಅದಕ್ಕೆ ಸರ್ಕಾರ ಯಾವುದೇ ಒಂದು ರೀತಿಯಲ್ಲಿ ಪರಿಹಾರ ಒದಗಿಸುತ್ತಿಲ್ಲವೆಂಬ ಒಂದು ಹಿನ್ನೆಲೆಯಲ್ಲಿ ಕಳೆದ ಒಂದು ವಾರದ ಹಿಂದೆ ಉಜನಿ ಜಲಾಶಯದ ಸಮೀಪ ಜಾಸ್ತಿ ಮಳೆಯಾಗಿದ್ದರಿಂದ ಭೀಮಾ ನದಿ ತುಂಬಿ ಹರಿಯುತ್ತಿರುವುದನ್ನು ತಾವೂ ಕೂಡ ನೋಡಬಹುದು. ಇವೊತ್ತು ಆ ಪ್ರದೇಶ ನನ್ನ ಮತಕ್ಷೇತ್ರದ ವ್ಯಾಪ್ತಿಗೆ ಬರುವುದರಿಂದ, ಅಲ್ಲದೆ, ಈ ಕುರಿತು ಸಂಪೂರ್ಣ ಮಾಹಿತಿ ನನಗಿರುವುದರಿಂದ ಈ ವಿಚಾರವನ್ನು ಸದನಕ್ಕೆ ಸ್ಪಷ್ಟಪಡಿಸುತ್ತಿದ್ದೇನೆ.

ಅಧ್ಯಕ್ಷರೆ, ಒಂದು ವಿಚಾರ, ಬಹುಶಃ ಕಳೆದ ಎರಡು ವರ್ಷಗಳಿಂದ ಮಳೆ ಕಡಿಮೆಯಾಗಿದ್ದರಿಂದ ನೀರಿನ ಅಭಾವವಿತ್ತು. ಬಹುಶಃ ಮಹಾರಾಷ್ಟ್ರದ ಸರ್ಕಾರಕ್ಕೆ ಒಂದೆರಡೂರು ಟಿ.ಎಂ.ಸಿ. ನೀರನ್ನು ಬಿಡಬೇಕು ಎನ್ನತಕ್ಕಂಥ ಒತ್ತಾಯ ನಾನು ಮತ್ತು ಆ ಭಾಗದ ಜನರು ಮಾಡಿದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಸ್ವತಃ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಕಡೆಗೆ ಬಂದು ಎಲ್ಲಾ ಮಂತ್ರಿಗಳನ್ನು ಮತ್ತು ವಿರೋಧ ಪಕ್ಷದ ಎಲ್ಲಾ ಹಿರಿಯ ನಾಯಕರನ್ನು ಮತ್ತು ನಮ್ಮನ್ನು ಕೂಡ ಕರೆದುಕೊಂಡು ಹೋಗಿ ಮಹಾರಾಷ್ಟ್ರ ಸರ್ಕಾರಕ್ಕೆ ವಿನಂತಿಯನ್ನು ಮಾಡುವುದರ ಮುಖಾಂತರ ಆ ಭಾಗದ ಜನರಿಗೆ ನೀರನ್ನು ಕೊಡಿಸುವಂಥ ಕೀರ್ತಿ ಸರ್ಕಾರಕ್ಕೆ ಮತ್ತು ಮುಖ್ಯಮಂತ್ರಿಗಳಿಗೆ ಸಲ್ಲುತ್ತಿದೆ. ಬಹುಶಃ ಒಂದು ಸಾರಿ ಅಲ್ಲ, ಮೂರು ಸಾರಿ ಮಹಾರಾಷ್ಟ್ರ ಸರ್ಕಾರಕ್ಕೆ ವಿನಂತಿಯನ್ನು ಮಾಡಿ ಪತ್ರವನ್ನು ಬರೆದು ಇವೊತ್ತು ಬಹುಶಃ ಮೂರು ಬಾರಿ ಒಂದರಂತೆ ಅಥವಾ ಇನ್ನೊಂದು ಸಾರಿ ಎರಡು ಟಿ.ಎಂ.ಸಿ. ನೀರು ಇವೊತ್ತು ಬಿಡಲಾಗಿದೆ.

ಇವೊತ್ತಿನ ದಿನ ಇಲ್ಲಿ ಶಿವಾನಂದ ಪಾಟೀಲರು ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಬಹುಶಃ ಒಂದು ಜಾಯಿಂಟ್ ವೆಂಚರ್ ನಿರ್ಮಾಣ ಮಾಡತಕ್ಕಂಥದ್ದು. ಅಲ್ಲಿ 1993-94ರಲ್ಲಿ ಪ್ರಾರಂಭವಾಗಿರತಕ್ಕಂಥ ಒಂದು ಬಾಂದರ್ ನಿರ್ಮಾಣ ಕಾರ್ಯಕ್ಕೆ ಏನು ಒಂದು ಅಡಿಗಲ್ಲು ಸಮಾರಂಭದಲ್ಲಿ ಅದು ಪ್ರಾರಂಭವಾಗಿತ್ತು ಅಲ್ಲಿಗೇ ಆ ಕೆಲಸ ನಿಂತುಹೋಗಿತ್ತು. ಬಹುಶಃ ನಮ್ಮ ಸರ್ಕಾರ ಬಂದಮೇಲೆ ನಮ್ಮ ಘನ ಮುಖ್ಯಮಂತ್ರಿಗಳು 18 ಕೋಟಿ ರೂಪಾಯಿಗಳನ್ನು ಒಂದೇ ಕಂತಿನಲ್ಲಿ ಕೊಟ್ಟು ಇವೊತ್ತು ನಾಲ್ಕು ಬಾಂದರ್‌ಗಳ ಕಾರ್ಯವನ್ನು ಪೂರ್ತಿ ಮಾಡಿದ್ದಾರೆ. ಬಹುಶಃ ಇನ್ನೂ ನಾಲ್ಕು ಬಾಂದಾರ್‌ಗಳಿಗೆ ಮಂಜೂರಾತಿಯನ್ನು ಅನುಮತಿಯ ಮೂಲಕ ಕೊಟ್ಟಿದ್ದಾರೆ. ಬಹುಶಃ ನನ್ನ ಮತ ಕ್ಷೇತ್ರದ ಬರ್ಮುಡಿ ಎನ್ನತಕ್ಕಂಥ ಒಂದು ಗ್ರಾಮದಲ್ಲಿ ಇನ್ನೊಂದು ಬಾಂದರ್ ಬರುತ್ತಿದೆ. ಈಗ ನಿರ್ಮಾಣ ಆಗಿರತಕ್ಕಂಥ ನಾಲ್ಕು ಬಾಂದರ್‌ಗಳೂ ಕೂಡ ಇವೊತ್ತು ನನ್ನ ಮತಕ್ಷೇತ್ರದಲ್ಲಿ ಬರುವುದರಿಂದ ಇವೊತ್ತು ಗೇಟ್ ಹಾಕತಕ್ಕಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇವೊತ್ತು ಪ್ರವಾಹ ಜಾಸ್ತಿ ಆಗಿರುವುದರಿಂದ ಗೇಟ್ ಹಾಕಿದರೆ ಸರಿಯಾಗುವುದಿಲ್ಲವೆನ್ನುವುದು ದೃಷ್ಟಿಯಿಂದ ಇವೊತ್ತು ಅಲ್ಲಿ ಇಂಜಿನಿಯರ್‌ಗಳು ಮತ್ತು ತಜ್ಞರು ಅದನ್ನು ಅಪಾಯಿಟ್ ಮಾಡಿದ್ದಾರೆ. ಅಧ್ಯಕ್ಷರೆ, ಇಲ್ಲಿ ಒಂದು ವಿಚಾರವನ್ನು ಸ್ಪಷ್ಟಪಡಿಸುತ್ತಿದ್ದೇನೆ. ಬಹುಶಃ ಈ ಬಾಂದರ್ ನಿರ್ಮಾಣ ಮಾಡಿದಂಥ ಕೀರ್ತಿ ಕಾಂಗ್ರೆಸ್ ಸರ್ಕಾರಕ್ಕೆ, ಕೃಷ್ಣಾರವರ ಸರ್ಕಾರಕ್ಕೆ ಸಲ್ಲಬೇಕಾಗುತ್ತದೆ. ಇವೊತ್ತು ಅಲ್ಲಿ ಆ ಒಂದು ಬಾಂದರ್ ನಿರ್ಮಾಣ ಆಗಬೇಕಾದಂಥ ಅವಧಿಯಲ್ಲಿ ಶಿವಾನಂದ ಪಾಟೀಲರ ಲಕ್ಷ್ಯ ಅಲ್ಲಿ ಹರಿಯಲಿಲ್ಲ. ಆ ಭಾಗದ ಜನರಿಗೆ ನೀರು ಇದೆಯೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ಅವರ ಲಕ್ಷ್ಯ ಆ ಕಾಲದಲ್ಲಿ ಹರಿಯಲಿಲ್ಲ. ಬಹುಶಃ ಈ ಸರ್ಕಾರ ಬಂದಮೇಲೆ ಅವರಿಗೇನೋ ಅದರ ಬಗ್ಗೆ ಅತೀವ ಆಸಕ್ತಿ, ಅದನ್ನು ನೋಡಿದರೆ ಬಹುಶಃ ನನಗೂ ಕೂಡ ಅವರ ಬಗ್ಗೆ ಬಹಳ ಪ್ರೀತಿ ಹರಿದುಬರುತ್ತಿದೆ. ಬಿಜಾಪುರದಲ್ಲಿ ಭೀಮಾ ನದಿಯಲ್ಲಿ ಮೊದಲು ಸಮಸ್ಯೆ ಏನಿತ್ತು ಬಹುಶಃ ತಿಕೋಟ ಮತ್ತು ಪ್ರತಿಯೊಂದು ಹಳ್ಳಿಗಳಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಇದೆ. ದಯವಿಟ್ಟು ಆ ಸಮಸ್ಯೆಯನ್ನು ಅವರು ಬಗೆಹರಿಸಬೇಕೆಂದು ಸದನದ ಮೂಲಕ ಅವರಿಗೆ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಇದಕ್ಕೆ ಕಾರಣವಿಷ್ಟೆ. ಅವರು ಏನು ಶಾಸಕರಾಗಿದ್ದಾರೆ ಅವರ ಶಾಸಕರ ಮತ ಕ್ಷೇತ್ರದಲ್ಲಿ ನನ್ನ ಸ್ವಂತ ಗ್ರಾಮ ಕೂಡ ಬರುತ್ತಿದೆ. ನನ್ನ ಸ್ವಂತ ಗ್ರಾಮದಲ್ಲಿ ಕಳೆದ ಎರಡು ತಿಂಗಳುಗಳಿಂದ ಕುಡಿಯುವ ನೀರಿನ ಸಮಸ್ಯೆ ಇರುವುದನ್ನು ನಾವು ಎದುರಿಸುತ್ತಿದ್ದೇವೆ. ಆ ಒಂದು ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ಅವರು ವಿಫಲರಾಗಿದ್ದಾರೆ. ಹೀಗಿರುವಾಗ ಇವೊತ್ತು ನನ್ನ ಮತಕ್ಷೇತ್ರದಲ್ಲಿ ಬಂದು ನೀರಿನ ಒಂದು ಪರಿಸ್ಥಿತಿ ಹೀಗಿದೆ ಎಂದು ಅವರು ಹೇಳುವುದನ್ನು ಖಂಡಿಸಬೇಕಾಗುತ್ತದೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಪಾಟೀಲ್ : ನಾನು ಮಾತನಾಡಿರುವುದು ಭೀಮಾ ನದಿ ವಿಷಯದ ಬಗ್ಗೆ.

(ಗೊಂದಲ)

ಅಧ್ಯಕ್ಷರು : ಇನ್ನೂ ಹೆಚ್ಚಿಗೆ ಯಾರ್ಯಾದರೂ ಭೀಮಾ ನದಿ ಬಗ್ಗೆ ಮಾತನಾಡುತ್ತೀರಾ? ಯಾರೂ ಇಲ್ಲ, ಆಯಿತು ಬಿಡಿ. ಈಗ ಒಂದು ಪ್ರಕಟಣೆ ಇದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಅಧ್ಯಕ್ಷರೆ, ಭೀಮಾ ನದಿ ಬಗ್ಗೆ ಉತ್ತರವನ್ನಾದರೂ ಸ್ವಲ್ಪ ಕೊಡಿಸಿ ಸಾರ್. ನಾವು ಸಮಾಧಾನ ಮಾಡಿಕೊಂಡು ಹೋಗ್ತೀವೆ.

ಅಧ್ಯಕ್ಷರು : ನಾನು ಮೊನ್ನೆಯೇ ಹೇಳಿದೆ. ಮಾನ್ಯ ಮಂತ್ರಿಗಳು ಇರೋದಿಲ್ಲ ಎಂದರೆ ಮಂತ್ರಿಗಳು ಇಲ್ಲದಿದ್ದರೆ ಪರವಾಗಿಲ್ಲ ಕೇವಲ ಮೆನ್‌ಶನ್ ಮಾಡ್ತೇವೆ ಎಂದು ಹೇಳಿದಿರಿ. ಆಗ ಆ ರೀತಿ ಹೇಳ್ತೀರಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಏನ್ ಸಾರ್ ಇದು. ಉತ್ತರಾನೂ ಇಲ್ಲ, ಏನೂ ಇಲ್ಲ ಅಂದ್ರೆ ಹೇಗೆ?

ಅಧ್ಯಕ್ಷರು : ಸ್ವಾಮಿ ಶೆಟ್ಟರ್‌ರವರೆ, ದಯವಿಟ್ಟು ಕ್ಷಮಿಸಬೇಕು. ನಾನು ಮೂರ್ನಾಲ್ಕು ಸಲ ಹೇಳಿದೆ, ಮಂತ್ರಿಗಳು ಒಂದ್ಸಲ ಇರೋದಿಲ್ಲವೆಂದು ಹೇಳಿದಾಗ ಅವರು ನಮಗೆ ಉತ್ತರವೇ ಬೇಡಿ, ಕೇವಲ ಮೆನ್‌ಶನ್ ಮಾಡ್ತೇವೆ ಎಂದು ಹೇಳ್ತಾರೆ. ಆಗ ಆ ರೀತಿ ಹೇಳಿದ್ದಾರೆ, ಆದರೆ ಈಗ ಈ ರೀತಿ ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅಧ್ಯಕ್ಷರೆ, ಇದಕ್ಕೆ ಉತ್ತರ ಕೊಟ್ಟಿದ್ದೇವೆ. ಉತ್ತರ ಕೊಟ್ಟಿಲ್ಲವೆಂದು ಆಪಾದನೆ ಬರಬಾರದು.

ಅಧ್ಯಕ್ಷರು : ಬರಬಾರದು, ಕರೆಕ್ಟ್.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಒಂದೇ ಒಂದು ಸೆಂಟೆನ್ಸ್‌ನಲ್ಲಿ ಏನು ಹೇಳಿದ್ದೇವೆಂದರೆ, ಸಬ್‌ಜುಡೀಸ್, ಆದ್ದರಿಂದ ಉತ್ತರಿಸುವುದಿಲ್ಲ ಎಂದು ಹೇಳಿದ್ದೇವೆ.

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಹೆಚ್ಚು ನೀವು ಕರುಣೆಯನ್ನು, ಕನಿಕರವನ್ನು ಅವರಿಗೆ ತೋರಿಸಿ ತೋರಿಸಿ ಸರ್ಕಾರದ ಬಿಲ್‌ಗಳು ಇವೊತ್ತು ಹಾಗೆಯೇ ಉಳಿದುಕೊಳ್ಳುವ ಹಾಗಾಯಿತು.

ಅಧ್ಯಕ್ಷರು : ಪೆಂಡಿಂಗ್ ಇಲ್ಲವಲ್ಲಾ ತೆಗೆದುಕೊಳ್ಳೋಣ, ಕೃಷ್ಣಪ್ಪನವರೇ, we will take up. I am ready to sit here even upto p.m. ಪಾರ್ಲಿಮೆಂಟಿನಲ್ಲಿ ಕೂರುವುದಿಲ್ಲವೆ, ಒಂದೊಂದು ದಿನ ಹನ್ನೊಂದು ಗಂಟೆಯವರೆಗೂ. I am ready, ಆದರೆ ಸಭೆಯನ್ನು ನಾನು ಕೇಳಬೇಕು. ಏಕೆಂದರೆ ಈಗಾಗಲೇ 8.30 ಆಗಿರುವುದರಿಂದ ಸಭೆಯನ್ನು ಕೇಳಬೇಕು.

ಶ್ರೀ ಎ. ಕೃಷ್ಣಪ್ಪ : ಅಧ್ಯಕ್ಷರೆ, ದಯಮಾಡಿ ನಾನು ಮಾತನಾಡಲು ಅವಕಾಶ ಕೊಡಿ. ನಾವೇನಾದರೂ ಹೇಳಿದರೆ ತಾವು ಕಾನೂನು ಎಂದು ಹೇಳುತ್ತೀರಿ. ಕಾನೂನಿಗೆ ನಾವು ತಲೆಬಾಗಬೇಕು. ತಮಗೆ ಗೌರವ ಕೊಟ್ಟು ನಾವು ಸುಮ್ಮನಿರುತ್ತೇವೆ.

ಅಧ್ಯಕ್ಷರು : ಸ್ವಾಮಿ, ಬಿಲ್‌ಗಳನ್ನು ತೆಗೆದುಕೊಳ್ಳುವುದಿಲ್ಲ ವೆಂದು ಹೇಳಿದಿರಲ್ಲಾ. ಬಿಲ್‌ಗಳನ್ನು ತೆಗೆದುಕೊಳ್ಳೋಣ. ಅದನ್ನು ತೆಗೆದುಕೊಳ್ಳುವ ಮೊದಲು ಒಂದು ಪ್ರಕಟಣೆ ಇದೆ. ಈ ಪ್ರಕಟಣೆ ಆಗಿಹೋಗಿಬಿಡಲಿ.

19. ಪ್ರಕಟಣೆ

ಅಧ್ಯಕ್ಷರು : "ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ